ಆದುದರಿಂದ ಮತ್ತೆ ಇದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಯಾವ ವಿಧವಾದ ಅವಕಾಶವೂ ಇಲ್ಲ ಎಂದು ಹೇಳುತ್ತೇನೆ. ಇದು ಒಂದನೇಯದು. ಎರಡನೆಯುದಾಗಿ ಇದರಲ್ಲಿ ಇನ್ನು ಏನು ಇದೆ ಎಂದರೆ

(ii) not more than one matter shall be discussed on the same motion,

(iii) the motion shall be restricted to a specific matter of recent occurrence ಎಂದು ಇದೆ. ಈ ಮೂರು ನಿಯಮಾವಳಿಗಳನ್ನು ನಾವು ನೋಡಿದಾಗ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವೇ ಇಲ್ಲ. ಬೇಕಾದರೆ ಬೇರೆ ರೂಪದಲ್ಲಿ ತಂದರೆ ಅದಕ್ಕೂ ಸಹ ಒಂದು ನೋಟೀಸ್ ಕೊಡಬೇಕು. ಹಾಗೆ ನೋಟೀಸ್ ಕೊಡದೇ ಹೋದರೆ ಅವರು ಏನು ಒಂದು ಪ್ರಸ್ತಾವನೆ ಮಾಡಬೇಕೆಂದಿದ್ದಾರೋ ಅದಕ್ಕೆ ಅವಕಾಶ ಇಲ್ಲ ಮತ್ತು ಅವಕಾಶ ಕೊಡಬಾರದು ಎಂದು ಹೇಳುತ್ತೇನೆ.

ಶ್ರೀ ವೈ. ರಾಮಕೃಷ್ಣ.—ತಾವು ಅವಕಾಶ ಕೊಡಿ ನೋಟೀಸ್ ಅನ್ನು ಕಳುಹಿಸಿಕೊಡುತ್ತೇನೆ. ನಾನು ಇಷ್ಟು ಅನ್ಯಾಯವಾಗುತ್ತದೆಂದು ಭಾವಿಸಿಕೊಂಡಿರಲಿಲ್ಲ. ಅದಕ್ಕೋಸ್ಕರವಾಗಿಯೇ ಯಾವ ಒಂದು ಪ್ರಚೋದನೆಯ ವಸ್ತು ಇದೆ ಎಂದು ಅದರ ಮೂಲ ಕಂಡುಹಿಡಿಯಲು ಅದರ ಬಗ್ಗೆ ಮಾತ ನಾಡುವುದಕ್ಕೆ ಅವಕಾಶ ಕೊಡಬೇಕು ಎಂದು ಕೇಳುತ್ತೇನೆ.

MR SPEAKER.—I have already allowed you.

ಶ್ರೀ ವೈ. ರಾಮಕೃಷ್ಣ.—ಸ್ವಾಮಿ, ನಾನು ಇಲ್ಲಿ ಗಲಾಟೆ ಮಾಡುವುದಕ್ಕೆ ಬಂದಿಲ್ಲ ಅಥವಾ ಸಭೆಯ ಕಾರ್ಯಕಲಾಪಗಳನ್ನು ಅಡ್ಡಿ ಮಾಡುವುದಕ್ಕೆ ಬಂದಿಲ್ಲ. ನಿಮಗೆ ಸಹಕಾರ ಮಾಡಬೇಕು, ಎಂದು ಬಂದಿದ್ದೇವೆ. ನಿಮಗೆ ಸಹಕಾರ ಹಸ್ತ ಕೊಟ್ಟಾಗ್ಯೂ ಕೂಡ ನೀವು ಅದನ್ನು ಕೇಳುವುದಕ್ಕೆ ಸಾಧ್ಯವಿಲ್ಲ ಅನ್ನುವುದಾದರೆ ನಾವೇನು ಮಾಡಬೇಕು ?

ಶ್ರೀ ಎಂ. ರಘುಪತಿ.—ರೂಲು ನಿಯಮಾವಳಿ ಪ್ರಕಾರ ನಡೆದುಕೊಂಡು ಹೋಗಲಿ.

ಶ್ರೀ ವೈ. ರಾಮಕೃಷ್ಣ.—ಬೆಳಗಿನಿಂದ ರಾತ್ರಿಯವರೆಗೂ ಕೂಡ ರೂಲ್ಸ್‌ನ್ನೇ ಅನುಸರಿಸಿಕೊಂಡು ಹೋಗುವುದಕ್ಕಾಗುವುದಿಲ್ಲ ಈ ಮಾತನ್ನು ನಾನು ಪದೇ ಪದೇ ಹೇಳುತ್ತಿದ್ದೇನೆ. ಈ ಬಗ್ಗೆ ಚರ್ಚೆ ಯಾಗಿದೆ ಅನ್ನುವುದು ನನಗೆ ಗೊತ್ತಿದೆ. ಆದರೆ ನಮ್ಮ ಪಾರ್ಟಿಯವರು ಏನು ಕೇಳಿದ್ದಾರೋ ಅದನ್ನು ಹೇಳುವುದಕ್ಕೆ ತಾವು ಅವಕಾಶ ಕೊಡಬೇಕು ಎಂದು ನಾನು ಕೇಳುತ್ತೇನೆ. in continuation of what has been already submitted, if you don't allow me then I have no other alternative, but dis-associate myself from participating in the discussion.

(Hon'ble Member Sri Y. Ramakrishna along with several other Congress-I Members withdrew from the House)

ಶ್ರೀ ಎಂ. ರಘುಪತಿ.—ಮಾನ್ಯ ಸದಸ್ಯರುಗಳು ನಿಯಮಗಳನ್ನೆಲ್ಲಾ ಗಾಳಿಗೆ ತೂರಿಬಿಟ್ಟು ಹೋಗುತ್ತಿದ್ದಾರೆ. ಇದನ್ನು ಅವರೇ ಆಲೋಚನೆ ಮಾಡಿಕೊಳ್ಳಬೇಕು.

ಗುಂಬ್ಬಿ ತಾಲ್ಲೂಕಿನ ನೇರಲಕೆರೆ ಗ್ರಾಮದಲ್ಲಿ ಶ್ರೀಮತಿ ಗೌರಮ್ಮ ಎನ್ನುವವರಿಗೆ, ಬಾಳಯ್ಯ ಎಂಬ ಜವಿುನ್ದಾರರಿಂದ ಆದ ಹಿಂಸೆಯ ಬಗ್ಗೆ

ಶ್ರೀ ಕೆ. ಬಿ. ಶಾನಪ್ಪ (ಶಾಹಬಾದ್).— ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕು ನೇರಲಕೆರೆ ಗ್ರಾಮದಲ್ಲಿ ನಡೆದಂಥ ಒಂದು ಪ್ರಕರಣವನ್ನು ನಾನು ತಮ್ಮ ನಮನಕ್ಕೆ ತರಬೇಕಾಗಿದೆ. ಇದರ ಬಗ್ಗೆ ನಾನು ರೂಲ್ ೩೩ರ ಕೆಳಗೆ ಒಂದು ನೋಟೀಸನ್ನು ಕೂಡ ಕೊಟ್ಟಿದ್ದೇನೆ. ಆ ಊರಲ್ಲಿ ಗೌರಮ್ಮ ಪರಮೇಶ್ವರಪ್ಪ ಎನ್ನುವ ೨೩ ವಯಸ್ಸಿನ ಹೆಂಗಸನ್ನು ಅಲ್ಲಿನ ಬಾಳಯ್ಯ ಎನ್ನುವವರು ಹಿಂಸೆ ಮಾಡಿ

ದ್ದಾರೆ, ಇದರ ಬಗ್ಗೆ ನಾವು ಪೋಲೀಸರಿಗೆ ಕಂಪ್ಲೇಂಟ್ ಮಾಡಿದರೂ ಸಹ ಏನು ಕ್ರಮ ತೆಗೆದುಕೊಳ್ಳಲಿಲ್ಲ. ಇದರಿಂದ ತಪ್ಪಿ ಮುಖಾಂತರ ನಾನು ಇದನ್ನು ಸರ್ಕಾರದ ಗಮನಕ್ಕೆ ಅನಿವಾರ್ಯವಾಗಿ ತರಬೇಕಾಗಿದೆ ಗೌರಮ್ಮನನ್ನು ತೆಂಗಿನ ಗಿಡಕ್ಕೆ ಕಟ್ಟಿಹಾಕಿ ಸುಮಾರು ನಾಲ್ಕು ಗಂಟೆಗಳ ಕಾಲ ಇವರು ಹೊಡೆದಿದ್ದಾರೆ. ಬಾಳಯ್ಯ ಮತ್ತು ಶ್ರೀಮಂತ ಜನರು ಗೌರಮ್ಮನ ಕಬ್ಜದಲ್ಲಿದ್ದಂಥ ಜಮೀನನ್ನು ಬಿಡಿಸಿಕೊಳ್ಳಲು ಇವರ ಮಾತನ್ನು ಗೌರಮ್ಮನು ಕೇಳದೆ ಇದ್ದುದರಿಂದ ಸುಮಾರು ನಾಲ್ಕು ಗಂಟೆಗಳ ಕಾಲ ಹೊಡೆದಿದ್ದಾರೆ ಇವಳ ರಕ್ಷಣೆಗೆ ಆ ಊರಲ್ಲಿ ಯಾರೂ ಬರಲಿಲ್ಲ. ಇವಳ ತಂದೆ ತಾಯಿಗಳು ಬಾಳಯ್ಯನ ಕಾಲಿಗೆ ಬಿದ್ದು ಕೇಳಿಕೊಳ್ಳಬೇಕಾಯಿತು. ಆದರೂ ಸಹ ಇವರಿಗೆ ಗೌರಮ್ಮನ ಮೇಲೆ ಕರುಣೆ ಬರಲಿಲ್ಲ. ಪೋಲೀಸ್ ಸ್ಟೇಷನ್‌ಗೆ ಕಂಪ್ಲೇಂಟ್ ಕೊಟ್ಟಿದ್ದೂ ಆಯಿತು, ಡಿ.ಐ.ಜಿ. ಯವರಿಗೆ ಕಳುಹಿಸಿದ್ದೂ ಆಯಿತು, ಬಾಳಯ್ಯ ಊರಿನವರನ್ನು ಅಂಜಿಸಿಕೊಂಡು ತಿರುಗಾಡಲಿಕ್ಕೆ ಹತ್ತಿದ್ದಾನೆ. ಆಲ್ಲಿಯ ಶ್ರೀಮಂತರು ಯಾರೂ ಇವರಿಗೆ ರಕ್ಷಣೆ ಕೊಡುತ್ತಿಲ್ಲ. ಸರ್ಕಾರದವರಾದರೂ ಸಹ ಇವರಿಗೆ ರಕ್ಷಣೆ ಕೊಡಬೇಕು. ಸರ್ಕಾರದವರು ವೀಕರ್ ಸೆಕ್ಷನ್‌ಗೆ ಬಹಳ ರಕ್ಷಣೆ ಕೊಡುತ್ತಾರೆಂದು ನಾವು ಗೆಸ್ ಮಾಡಿದ್ದೆವು. ಇಂಥ ಕೃತ್ಯ ಹಳ್ಳಿಯಲ್ಲಿ ನಡೆದ ಮೇಲೆ ಅದೂ ಹೆಣ್ಣು ಮಗಳ ಮೇಲೆ ನಡೆದ ಮೇಲೆ ಇದಕ್ಕೆ ರಕ್ಷಣೆ ಕೊಡಬೇಕಾದ್ದು ಸರ್ಕಾರದವರ ಕರ್ತವ್ಯ. ಯಾವುದೇ ದೌರ್ಜನ್ಯಗಳು ನಡೆದರೆ ಅವುಗಳ ಬಗ್ಗೆ ಸರ್ಕಾರದವರು ತೀವ್ರವಾದ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ, ಆದರೆ ಈ ಕೃತ್ಯ ನಡೆದು ೭-೮ ದಿವಸವಾದರೂ ಸಹ, ೧೮-೯-೮೩ ರಂದು ಇದು ನಡೆದಿದ್ದರೂ ಸಹ ಏನೂ ಕ್ರಮವನ್ನು ಸರ್ಕಾರದವರು ತೆಗೆದುಕೊಂಡಿಲ್ಲ. ಸಂಬಂಧಪಟ್ಟ ಮಂತ್ರಿಗಳು ಇದರ ಬಗ್ಗೆ ವಿಚಾರ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ. — ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರು ಈ ವಿಚಾರವನ್ನು ಸರ್ಕಾರದ ಗಮನಕ್ಕೆ ಈಗ ತಾನೇ ತಂದಿದ್ದಾರೆ. ಇದಕ್ಕೆ ಬೇಕಾಗಿರತಕ್ಕ ಹೇಳಿಕೆಯನ್ನು ನನಗೆ ಸ್ವಲ್ಪ ಕಾಲಾವಕಾಶ ಕೊಟ್ಟರೆ ಕೊಡುತ್ತೇನೆ. ನಾಳೆಯೇ ನಾನು ಹೇಳಿಕೆಯನ್ನು ಕೊಡಲಿಕ್ಕೆ ಏರ್ಪಾಡು ಮಾಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್. — ನಾನು ರೂಲ್ ೩೩ರ ಪ್ರಕಾರ ಒಂದು ನೋಟೀಸ್ ಕೊಟ್ಟು ಅದರ ಬಗ್ಗೆ ಕೇಳಿ ಕೇಳಿ ಸುಸ್ತಾಗಿದ್ದೇನೆ, ಹರಿಜನರು ಮನೆಯನ್ನು ಕಟ್ಟಿಕೊಳ್ಳಲಿಕ್ಕೆ ಕೊಟ್ಟಂಥ ಜಾಗದ ಬಗ್ಗೆ, ಚೋಳನಾಯಕನಹಳ್ಳಿಯಲ್ಲಿ ನಡದ ಪ್ರಕರಣದ ಬಗ್ಗೆ ಕೇಳಿದ್ದೇನೆ.

ಅಧ್ಯಕ್ಷರು. — ನಾಳೆಯ ದಿವಸ ಅದನ್ನು ತೆಗೆದುಕೊಳ್ಳಬಹುದು.

ಶ್ರೀ ಪಿ. ರಾಮ್‌ದೇವ್, — ನಾನು ಒಂದು ಗಂಭೀರವಾದ ವಿಚಾರವನ್ನು ರೂಲ್ ೩೩ ರ ಕೆಳಗೆ ಪ್ರಸ್ತಾಪಿಸಲು ನೋಟೀಸನ್ನು ಕೊಟ್ಟಿದ್ದೇನೆ. ಬೆಂಗಳೂರು ನಗರದ ೩೦ ಲಕ್ಷ ಪ್ರಜೆಗಳು ತಿಪ್ಪಗೊಂಡನ ಹಳ್ಳಿ ಜಲಾಶಯದ ನೀರನ್ನು ಕುಡಿಯುತ್ತಿದ್ದಾರೆ, ಇಲ್ಲಿಯ ನೀರು ಶುದ್ಧವಾಗಿರಬೇಕು. ಇದನ್ನು ಪ್ರೊಟೆಕ್ಟೆಡ್ ಏರಿಯಾ ಎಂದು ಮಾಡಿದ್ದಾರೆ.

ಅಧ್ಯಕ್ಷರು. — ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಸಭೆಯಲ್ಲಿಲ್ಲ.

ಶ್ರೀ ಗಂಗಣ್ಣ. — ನನ್ನ ಕ್ಷೇತ್ರದಲ್ಲಿ ಶಿರಾ ತಾಲ್ಲೂಕು ಉಯಿಲುಗೆರೆ ಗ್ರಾಮದಲ್ಲಿ ಪಾಠಶಾಲೆಯ ಬಗ್ಗೆ ಒಂದು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದೇನೆ. ನಾಳೆಯ ದಿವಸ ಅದು ಬಾರದೆ ಇದ್ದರೆ, ತಾವು ಸಂಬಂಧಪಟ್ಟ ಮಂತ್ರಿಗಳಿಗೆ ಆದೇಶವನ್ನು ಕಳುಹಿಸಿ ಪಾಠಶಾಲೆ ಕೂಡಲೇ ಪ್ರಾರಂಭ ವಾಗುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು. — ಈಗ ಲೆಜಿಸ್ಲೇಟೀವ್ ಬಿಸಿನೆಸ್.

Karnataka sales Tax (seeond Amendment) Bill 1983

Motion to Consider

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ). — ನಾನು ಕರ್ನಾಟಕ ಸೇಲ್ಸ್ ಟ್ಯಾಕ್ಸ್ (ಎರಡನೆಯ ತಿದ್ದುಪಡಿ] ಮಸೂದೆ ೧೯೮೩ನ್ನು ಸಭೆಯಲ್ಲಿ ಮಂಡಿಸುತ್ತಿದ್ದೇನೆ.